## ಆಪರೇಷನ್ ಸಕ್ಸೆಸ್!

ವೃದ್ಧ ಸೋಮಶೇಖರಯ್ಯನವರು ಆಪರೇಷನ್ ಥಿಯೇಟರ್‌ನಲ್ಲಿ ಮಲಗಿದ್ದರು. ದೊಡ್ಡ ಶಸ್ತ್ರಚಿಕಿತ್ಸೆ ಆಗಬೇಕಿತ್ತು. ಅವರ ಅಳಿಯನೇ ಅದನ್ನು ನಿರ್ವಹಿಸಬೇಕಿದ್ದ ವೈದ್ಯ. ಶಸ್ತ್ರಚಿಕಿತ್ಸೆ ಆರಂಭಿಸಬೇಕೆನ್ನುವಾಗ ಮಾವ ಅವರ ಕೈ ಹಿಡಿದು, 'ಅಳಿಯಂದ್ರೆ, ನೀವು ಯಶಸ್ವಿಯಾಗಿಯೇ ಆಪರೇಷನ್ ಮಾಡುವಿರೆಂಬ ಭರವಸೆ ನನಗಿದೆ. ಒಂದೊಮ್ಮೆ ದುರದೃಷ್ಟವಶಾತ್ ನನಗೇನಾದರೂ ಆದರೆ ನಿಮ್ಮ ಅತ್ತೆ ನಿಮ್ಮೊಂದಿಗೇ ನೆಲೆಸುತ್ತಾಳೆ. ಅವಳನ್ನು ಜತನದಿಂದ ನೋಡಿಕೊಳ್ಳಿ' ಎಂದು ಅರುಹಿದರು. ಆವೇಶಭರಿತರಾದವರಂತೆ ಅಳಿಯ ವೈದ್ಯ ಬಹಳ ಅಸ್ಥೆಯಿಂದ ಶಸ್ತ್ರಕ್ರಿಯೆ ನಡೆಸಿದರು ಮತ್ತು ಆಪರೇಷನ್ ಅದ್ಭುತ ರೀತಿಯಲ್ಲಿ ಯಶಸ್ವಿಯಾಯಿತು!

**ರಮಣ್ ಶೆಟ್ಟಿ ರೆಂಜಾಳ್**





ಕಲೆ: ಗಣೇಶ ಆಚಾರ್ಯ

## ಖುಷಿಯ ಮೂಲ

ಗಿರೀಶ ಹಾಗೂ ಗೌರೀಶ ಆತ್ಮೀಯ ಸ್ನೇಹಿತರು. ಹಿಂದಿನ ದಿನ ಬಹಳ ದುಃಖದಲ್ಲಿದ್ದ ಗಿರೀಶ ಇಂದು ಖುಷಿಯಾಗಿದ್ದುದನ್ನು ನೋಡಿ ಗೌರೀಶ ಕೇಳಿದ, 'ಯಾಕೊ ಗಿರಿ, ನಿನ್ನೆ ತುಂಬಾ ಬೇಸರದಲ್ಲಿದ್ದೆ. ಇವತ್ತು ಮಾತ್ರ ಸಂತೋಷದಿಂದ ಓಡಾಡಿಕೊಂಡಿದ್ದೀಯಲ್ಲ?' ಎಂದು. ಅದಕ್ಕೆ ಗಿರೀಶ ಅಷ್ಟೇ ಉತ್ಸಾಹದಿಂದ ನುಡಿದ, 'ನಿನ್ನೆ ನನ್ನ ಹೆಂಡತಿ 50 ಸಾವಿರ ರೂಪಾಯಿ ಕೊಟ್ಟು ಸೀರೆ ತೆಗೆದುಕೊಂಡಿದ್ದಳು'. 'ಮತ್ತೆ? ಇವತ್ಯಾಕೆ ಈ ಖುಷಿ?' ಕೇಳಿದ ಗೌರೀಶ. 'ಇವತ್ತು ಅವಳು ಆ ಸೀರೆ ಉಟ್ಟುಕೊಂಡು ನಿನ್ನ ಹೆಂಡತಿಗೆ ತೋರಿಸಲು ಹೋಗಿದ್ದಾಳೆ' ಎಂದ ಗಿರೀಶ.

**ಸುಧಾ ಎಚ್.ಎಸ್.**